ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲಿ ಹೇಳಿರುವುದು ಹೈರ್ ಪರ್ಚೇಸ್ ಎಂದು. ಆದರೆ ಹೈರ್ ಮೇಲೆ ಕೊಟ್ಟಿರುವುದು.

Sri C. K. RAJAIAH SETTY.—May I know the number of persons to whom Government have sold tractors on the hire-purchase system ?

Sri H. S. RUDRAPPA.—During the last 3 years the Government have sold tractors to two persons on hire purchase system.

ಶ್ರೀ ಕೆ. ಸಿ. ರೇವಣ್ಣಸಿದ್ದಪ್ಪ.—ಸಾಮಾನ್ಯವಾಗಿ ದೊಡ್ಡ ದೊಡ್ಡ ಜಮೀನ್‌ದಾರರು, ಅನುಕೂಲಸ್ಥರೇ ಆಲ್ಲವೇ ಈ ಟ್ರ್ಯಾಕ್ಟರುಗಳನ್ನು ಉಪಯೋಗಿಸುತ್ತಾ ಇರುವವರು ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಹೇಳಲಕ್ಕೆ ಆಗುವುದಿಲ್ಲ. ಸ್ವಲ್ಪ ಹೆಚ್ಚು ಜನ ಆ ರೀತಿ ಇರಬಹುದು. ಬಡವರೂ, ಸಣ್ಣ ಸಣ್ಣ ಜಮೀನ್‌ದಾರರೂ ಉಪಯೋಗಿಸಿದ್ದಾರೆ ಎಂದು ನಮಗೆ ಗೊತ್ತಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣ ನಿಂತಿರುವುದು ಅನುಕೂಲಸ್ಥರದೇ ಅಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಎಂದು ನನ್ನಲ್ಲಿ ರೆಕಾರ್ಡ್ ಇಲ್ಲ. ಇದನ್ನು ತಿಳಿದುಕೊಳ್ಳಬೇಕು. ಅನುಕೂಲಸ್ಥರದು ಇದ್ದರೆ ಇನ್ನೂ ಉತ್ತಮವೇ ಆಯಿತು. ಹಣ ಜಾಗ್ರತೆ ಬರುತ್ತದೆ.

		1954–55 Rs. nP.
ಮೈಸೂರು	...	ಏನೂ ಇಲ್ಲ
ಕೋಲಾರ	...	ಏನೂ ಇಲ್ಲ
ಚಿತ್ರದುರ್ಗ	...	ಏನೂ ಇಲ್ಲ
ಬಳ್ಳಾರಿ	...	102 ...
ತುಮಕೂರು	...	31 19
ಚಿಕ್ಕಮಗಳೂರು	...	25 ...
ಹಾಸನ	...	126 50
ಶಿವಮೊಗ್ಗ	...	265 25
ಬೆಂಗಳೂರು	...	171 50
ಮಂಡ್ಯ	...	385 50

ಶ್ರೀ ಜಿ. ಎನ್. ಪುಟ್ಟಣ್ಣ.—ಬುಲ್ ಡೋಜರ್ಸ್, ಟ್ರ್ಯಾಕ್ಟರುಗಳಿಗೆ ಡೀಜೆರ್ ಎಣ್ಣೆಯನ್ನು ಡಿಪಾರ್ಟ್‌ಮೆಂಟಿನವರು ನಪ್ಲೈ ಮಾಡುತ್ತಾರೋ ಅಥವಾ ಪ್ರೈವೇಟ್ ಆಗಿ ತೆಗೆದುಕೊಳ್ಳಬೇಕಾಗುತ್ತದೆಯೋ ?

ಶ್ರೀ ಎಚ್. ಎಸ್. ರುದ್ರಪ್ಪ.—ಡಿಪಾರ್ಟ್‌ಮೆಂಟ್ ನವರು ನಪ್ಲೈಮಾಡುತ್ತಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಡೀಜೆರ್ ಆಯಿಲ್ ತಂದು machine out of order ಆಗಿದೆ ಎಂದು ಹೇಳಿ ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಬಂದಿಲ್ಲ. ಹಾಗೆ ಏನಾದರೂ ಇದ್ದರೆ ತನಿಖೆ ಮಾಡುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—(ಬ) ಪ್ರಶ್ನೆಗೆ 'yes' ಎಂದು ಹೇಳಿದ್ದೀರಿ. ಎಷ್ಟು ಬಾಕಿ ಇದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಆಗಲೇ ತಿಳಿಸಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹತ್ತು ವರ್ಷಗಳಿಂದ ಬಾಕಿ ನಿಂತಿರುವುದು ಎಷ್ಟು ? 45 ವರ್ಷಗಳಿಂದ ಬಾಕಿ ನಿಂತಿರುವುದು ಎಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—ಹತ್ತು ವರ್ಷದ್ದು ಹೇಳಲಕ್ಕೆ ಆಗುವುದಿಲ್ಲ. ಮೂರು ವರ್ಷದ್ದು ಕೇಳಿದ್ದಾರೆ. 4,350 ರೂಪಾಯಿ ಬಾಕಿ ಇದೆ ಎಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಇದರಲ್ಲಿ ರೆಮಿಷ್ಷನ್ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಮೂರು ವರ್ಷಗಳಲ್ಲಿ ರೆಮಿಷ್ಷನ್ ಕೊಟ್ಟಿಲ್ಲ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅದಕ್ಕೆ ಹಿಂದೆ ಬರಬೇಕಾಗಿದ್ದ ಬಾಕಿಯಲ್ಲಿ ಎಷ್ಟು ರೆಮಿಷ್ಷನ್ ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಬೇರೆ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 118 ಜನರಿಂದ ಬರಬೇಕಾದ ಬಾಕಿ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—ಬಾಕಿ ಒಟ್ಟು ಇರುವುದು ಕೇಳಿದ್ದೀರಿ. ಡಿಸ್ಟ್ರಿಕ್ಟಿನದು ಒಂದಿ ಹೇಳುತ್ತೇನೆ.

1955–56 Rs. nP.	1956-57 Rs. nP.
461 ...	406 25
435 25	365 75
ಏನೂ ಇಲ್ಲ	ಏನೂ ಇಲ್ಲ
ಏನೂ ಇಲ್ಲ	33 ...
ಏನೂ ಇಲ್ಲ	5 ...
ಏನೂ ಇಲ್ಲ	ಏನೂ ಇಲ್ಲ
166 50	149 50
68 19	115 25
ಏನೂ ಇಲ್ಲ	9 ...
750 ...	633 50

Inconvenience caused to Marathi Speaking Employees as a result of adopting Kannada as Official Language in Belgaum District.

Q.—678. Sri N. O. SAMAJI (Belgaum II).—

Will the Government be pleased to state:—

(a) whether they are aware of the inconvenience caused to Marathi speaking employees in Belgaum District as a result of adopting Kannada language for official purposes in the various Departments;

(*b*) whether it is a fact that such employees are being forced to learn Kannada language;

(*c*) if so, the facilities, if any, given to them in this regard?

A.—Sri S. NIJALINGAPPA (Chief Minister).—

(*a*) No.

(*b*) No.

(*c*) In view of the answers to clauses (*a*) and (*b*) above this question does not arise.

[Sri N. O. SAMAJI.—(In Marathi) Whether it is a fact that such employees are being forced to learn Kannada language?]

*ಶ್ರೀ ಎಸ್. ನಿಜಲಿಂಗಪ್ಪ.—ಈ ರೀತಿಯಾಗಿ ಒತ್ತಾಯ ಮಾಡಿದ್ದು ನನಗೆ ಗೊತ್ತಿಲ್ಲ. ಒಂದುವೇಳೆ ಅಂಥಾದ್ದೇನಾದರೂ ಇದ್ದುದನ್ನು ನನಗೆ ಹೇಳಿದರೆ ನಾನು ವಿಚಾರಿಸುತ್ತೇನೆ.

Sri G. B. SHANKAR RAO.—Is it not obligatory that the Government officials should be conversant with the regional language?

Sri S. NIJALINGAPPA.—It would be desirable. In those areas it is not insisted upon.

Sri F. H. MOHSIN.—Is it not a fact that Government servants have to pass certain tests in the regional language?

Sri S. NIJALINGAPPA.—Yes, it is necessary. As I said, in those areas we are not insisting upon that because they cannot read and write Kannada.

Sri K. HANUMANTHAIYA.—Are there people in that area who know only Marathi and do not know Kannada at all?

Sri S. NIJALINGAPPA.—I think the number of persons who do not know Kannada is small.

Conversion of Crescent House into a Minister's Residence

Q.—1318. Sri G. SIVAPPA (Chitaldrug).—

Will the Government be pleased to state:—

(*a*) whether the Crescent House (former Guest House) has been converted into a Minister's residence;

(*b*) if so, the reasons therefor;

(*c*) the number of members of the Legislature that were being accommodated in the said Guest House previously during the Sessions?

A.—Sri S. NIJALINGAPPA (Chief Minister).—

(*a*) Yes.

(*b*) Consequent on the States Reorganisation, there was expansion in the Ministry. The Ministers had to be provided with free furnished accommodation according to the Minister's Salaries and Allowances Act and as there were no other Government Buildings available, Crescent House was released for the occupation of one of the Ministers.

(*c*) 20.

*ಶ್ರೀ ಜಿ. ಶಿವಪ್ಪ.—ರಾಜ್ಯ ಪುನರ್ವಿಂಗಡಣೆಯ ನಂತರ ಸದಸ್ಯರ ಸಂಖ್ಯೆಯೂ ಸಹ ಜಾಸ್ತಿಯಾಗಿದೆ. ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

*ಶ್ರೀ ಎಸ್. ನಿಜಲಿಂಗಪ್ಪ.—ಬಂದಿದೆ.

ಶ್ರೀ ಜಿ. ಶಿವಪ್ಪ.—208 ಜನ ಸದಸ್ಯರ ಅನುಕೂಲತೆ ಮುಖ್ಯವೋ ಅಥವಾ 11 ಜನ ಮಂತ್ರಿಗಳ ಅನುಕೂಲತೆಯು ಹೆಚ್ಚು ಮುಖ್ಯವೋ ಎಂಬುದನ್ನು ಸಾವಧಾನವಾಗಿ ಯೋಚನೆಮಾಡಿ ಹೇಳುತ್ತೀರಾ?

ಅಧ್ಯಕ್ಷರು.—ನೀವು ಪ್ರಶ್ನೆ ಕೇಳುತ್ತಿಲ್ಲ. ಅಭಿಪ್ರಾಯ ಕೇಳುತ್ತಿದ್ದೀರಿ. You are asking the opinion of the Government.

ಶ್ರೀ ಜಿ. ಶಿವಪ್ಪ.—ನಾಟಿಮಿ, ಮೆಂಬರುಗಳ ಅನುಕೂಲ ಪ್ರಶ್ನೆ ಇದೆ. ಅಭಿಪ್ರಾಯ ಅಲ್ಲ. It is a question of fact.

ಅಧ್ಯಕ್ಷರು.—ಯಾವುದು ಹೆಚ್ಚು ಮುಖ್ಯವಾಗಿದೆ ಎಂಬುದು opinion ಆಗುತ್ತದೆ.

Sri S. NIJALINGAPPA.—If my friend wants information I can give him. But it is a matter of opinion.

ಶ್ರೀ ಜಿ. ಶಿವಪ್ಪ.—ಕೈಸೆಂಟ್ ಹೌಸ್‌ನಲ್ಲಿ ಒಳ್ಳೆಯ ಫರ್ನಿಚರ್ ಹಿಂದಕ್ಕೆ ಇತ್ತು. ಈಗ ಅದು ಅಲ್ಲಿ ಕಾಣುವುದಿಲ್ಲ. ಹಾಗಾದರೆ ಅದು ಎಲ್ಲಿ ಹೋಯಿತು?

ಶ್ರೀ ಎಸ್. ನಿಜಲಿಂಗಪ್ಪ.—ಅದು ನನಗೆ ಗೊತ್ತಿಲ್ಲ. ಇದೊಂದು ಹೊಸ ವರ್ತಮಾನ.

ಶ್ರೀ ಜಿ. ಶಿವಪ್ಪ.—ಕೈಸೆಂಟ್ ಹೌಸಿನಲ್ಲಿ ಇರತಕ್ಕ ಮಂತ್ರಿಗಳು ಆರೋಗ್ಯವಾಗಿ ಇದ್ದಾರೆಯೇ?

ಅಧ್ಯಕ್ಷರು.—Order, order, ಇಂಥ ಪ್ರಶ್ನೆ ಕೇಳಬಾರದು.

Sri G. SIVAPPA.—I am more concerned with the health of the Minister because he is our Minister. (*Laughter*).

ಶ್ರೀ ಡಿ. ಟಿ. ಸೀತಾರಾಮರಾವ್.—ಹಾಗಾದರೆ ಅಲ್ಲಿರತಕ್ಕ ಮಂತ್ರಿಗಳು ಅನಾರೋಗ್ಯವಾಗಿ ಇದ್ದಾರೆಯೇ?

Mr. SPEAKER.—Order, order.

ಶ್ರೀ ಯು. ಎಂ. ಪ್ರಾದಪ್ಪ.—ಈ ಕೈಸೆಂಟ್ ಹೌಸನ್ನು ವಿರೋಧ ಪಕ್ಷದವರ ವಾಸಕ್ಕಾಗಿ ಹಿಂದಕ್ಕೆ ಮೀಸಲಾಗಿ ಇಟ್ಟಿದ್ದು ಸರಕಾರಕ್ಕೆ ಗೊತ್ತಿದೆಯೇ?